ಅತ್ಯಂತ ಸುಖವಾದದ್ದು ಎಂದು ಭಾವಿಸತೊಡಗಿದೆ. ಸಮಾಜವೂ ಹಾಗೆಯೇ ಪ್ರತಿಕ್ರಿಯೆ ಕೊಡುತ್ತಿತ್ತು. ನಾವಿಬ್ಬರು ಸೊಗಸಾಗಿ ಅಲಂಕಾರ ಮಾಡಿಕೊಂಡು ಜೊತೆಯಾಗಿ ಹೋದರೆ ಸಾಕು, ನಮ್ಮಂತಹ ಒಳ್ಳೆಯ ಜೋಡಿಯೇ ಇಲ್ಲವೆನ್ನುವಂತೆ ಎಲ್ಲರೂ ಸಂಭ್ರಮ ವ್ಯಕ್ತಪಡಿಸುತ್ತಿದ್ದರು. ಅವರ ಆಫೀಸಿನಲ್ಲಿ ಎರಡು ಬಾರಿ ನಮ್ಮಿಬ್ಬರಿಗೆ 'ಬೆಸ್ಟ್ ಕಪಲ್' ಬಹುಮಾನ ಬಂದಿದೆ ಗೊತ್ತಾ? ಕಲಶದ ಕಾಯಿ ಒಳಗೊಳಗೇ ಕೊಳೆತು ಹೋಗಿದೆ ಎನ್ನುವುದು ಅವರಿಗೂ ಗೊತ್ತಿರಲಿಲ್ಲ, ನನಗೂ ಬೇಗನೆ ಗೊತ್ತಾಗಲಿಲ್ಲ. ಎಲ್ಲವೂ ಸರಿ ಹೋಗುತ್ತದೆ, ಎಲ್ಲವೂ ಸೊಗಸಾಗಿರುತ್ತದೆ ಎನ್ನುವ ನಿರೀಕ್ಷೆಯಲ್ಲಿಯೇ ಬದುಕನ್ನು ಕಳೆದುಬಿಟ್ಟೆ. ಈಗ ನಡೆದ ಅನ್ಯಾಯವನ್ನು ನೆನೆದರೆ ಸಂಕಟವಾಗುತ್ತದೆ' ಎಂದಳು.

'ಇಷ್ಟು ದಿನ ಹೊಳೆಯದ ಬಿಡುಗಡೆಯ ಆಯ್ಕೆ ಈಗ ಹೊಳೆದಿದ್ದಕ್ಕೆ ಕಾರಣವಾದರೂ ಏನು?' ಎಂದೆ. ಅವಳು ಒಂಚೂರು ಯೋಚಿಸದೆ, ಗೊತ್ತಿದ್ದ ಪ್ರಶ್ನೆಗೆ ತಟ್ಟನೆ ಉತ್ತರಿಸುವಂತೆ 'ಮಗಳು...' ಎಂದಳು. ನನಗೆ ಅವಳ ಉತ್ತರ ಸರಿಯಾಗಿ ಅರ್ಥವಾಗಲಿಲ್ಲ. 'ನ್ಯಾಯಾಲಯ ಮಗಳನ್ನು ನಿಮಗೇ ಹಸ್ತಾಂತರಿಸುತ್ತದಲ್ಲವೆ?' ಎಂದೆ.

'ಸಮಸ್ಯೆ ಅದಲ್ಲ. ಇಷ್ಟು ದಿನ ಅವಳು ಚಿಕ್ಕವಳಾಗಿದ್ದಳು. ದಾಂಪತ್ಯ ಎಂದರೆ ಏನೆಂದು ತಿಳಿಯುತ್ತಿರಲಿಲ್ಲ. ಈಗ ಯೌವನಕ್ಕೆ ಕಾಲಿರಿಸಿದ್ದಾಳೆ. ಈಗಾಗಲೇ ಅವಳಿಗೆ ದೈಹಿಕ ಸಂಬಂಧ, ಲೈಂಗಿಕ ಬಯಕೆ, ಗೇ, ಲೆಸ್ಬಿಯನ್ ಎಲ್ಲವೂ ತಿಳಿಯುತ್ತಿವೆ. ಈಗಿನ ಕಾಲದ ಹುಡುಗರು ನಮಗಿಂತಲೂ ಬೇಗನೆ ಜಗತ್ತನ್ನು ಕಂಡುಕೊಳ್ಳುತ್ತಾರೆ. ಇನ್ನು ಕೆಲವೇ ವರ್ಷಗಳಲ್ಲಿ ಅವಳಿಗೆ ಅಪ್ಪ-ಅಮ್ಮನ ಮಧ್ಯೆ ಇರುವ ಹುಸಿ ಸಂಬಂಧ ಅರ್ಥವಾಗುತ್ತದೆ. ಬೇರೆ ಬೇರೆ ಕೋಣೆಯಲ್ಲಿ ಮಲಗುವ ಗಂಡ-ಹೆಂಡಿರನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಕಷ್ಟವೆ? ಅಪ್ಪ ಗೇ ಎನ್ನುವುದೂ ತಿಳಿಯುತ್ತದೆ. ಅವನಿಗೇ ನೇರವಾಗಿ ಪ್ರಶ್ನೆ ಕೇಳಿದರೂ ಅಚ್ಚರಿಯಿಲ್ಲ. ಅವಳ ಪ್ರಶ್ನೆಗೆ ಅವನೆಂದೂ ಸುಳ್ಳು ಹೇಳಲಾರ, ಸತ್ಯ ಒಪ್ಪಿಕೊಂಡು ಬಿಡುತ್ತಾನೆ. ಇನ್ನು ನನ್ನ ಗತಿಯೇನು? ಗೇ ಪತಿಯ ಜೊತೆ ಇಷ್ಟೊಂದು ವರ್ಷ ಬದುಕಿದೆನೆಂದು ಗೊತ್ತಾದರೆ ಅವಳು ನನ್ನ ಕಂಡು ಅಸಹ್ಯ ಪಟ್ಟುಕೊಳ್ಳುವುದಿಲ್ಲವೆ? ಧೈರ್ಯದಿಂದ ಬಿಡುಗಡೆ ಹೊಂದಿ ಮತ್ತೊಂದು ಸಂಸಾರ ಮಾಡಿಕೊಳ್ಳಬೇಕೆಂಬ ಪ್ರಬುದ್ಧತೆಯೂ ಇಲ್ಲದ ಅಮ್ಮನನ್ನು ಯಾವ ಮಗಳು ಗೌರವಿಸುತ್ತಾಳೆ? ಅವಳ ಕಣ್ಣಲ್ಲಿ ನಾನು ತುಚ್ಛವಾಗಲಾರೆ. ಅದನ್ನು ಊಹಿಸಲೂ ನನಗೆ ಸಾಧ್ಯವಿಲ್ಲ. ಅಂತಹ ಘಟನೆ ನಡೆಯುವುದರೊಳಗೆ ನನಗೆ ಈ ಸಂಬಂಧದಿಂದ ಬಿಡುಗಡೆ ಬೇಕು. ಹುಸಿ ಬದುಕಿನಲ್ಲಿ ನನಗೆ ಉಸಿರು ಕಟ್ಟುತ್ತಿದೆ. ಬಿಡುಗಡೆಯಾದ ನಂತರ ನನ್ನ ಬದುಕು ಏನಾಗುತ್ತದೆಯೋ ಗೊತ್ತಿಲ್ಲ. ಆದರೆ ಧೈರ್ಯದ ಹೆಜ್ಜೆಯನ್ನು ಕಡೆಗೂ ಇಟ್ಟೆ ಎನ್ನುವ ನೆಮ್ಮದಿ ನನ್ನಲ್ಲಿ ಉಳಿಯುತ್ತದೆ. ಕಡೆಗೂ ಬದುಕಿಗೆ ಬೇಕಿರುವುದು ಇಂತಹ ನೆಮ್ಮದಿಯೇ ಅಲ್ಲವೆ?' ಎಂದಳು.

ನನಗೆ ಹೆಚ್ಚಿನದೇನೂ ಹೇಳುವುದಕ್ಕೆ ಸಾಧ್ಯವಿರಲಿಲ್ಲ. ಅವಳ ಆಯ್ಕೆ, ನಿರ್ಧಾರಗಳು ಸ್ಪಷ್ಟವಾಗಿದ್ದವು. ಆದ್ದರಿಂದ ಅವರಿಬ್ಬರನ್ನೂ ಕರೆಸಿ, ವಸ್ತುಸ್ಥಿತಿಯನ್ನು ವಿವರಿಸಿ, ಬಿಡುಗಡೆಯ ಆಕೆಯ ಖಚಿತ ನಿರ್ಧಾರವನ್ನು ಅವನಿಗೆ ತಿಳಿಸಿದೆ. ಅದನ್ನು ಖಾತರಿಪಡಿಸಲು 'ನಿನಗೆ ಒಪ್ಪಿಗೆಯಿದೆಯಲ್ಲವೆ?' ಎಂದು ಅವನನ್ನು ಕೇಳಿದೆ.

ತಲೆಬಾಗಿಸಿಕೊಂಡೇ ಅವನು ಒಪ್ಪಿಗೆಯನ್ನು ತಿಳಿಸಿದ. ಅವನು ಅಳುತ್ತಿದ್ದಾನೆಂದು ನಮ್ಮಿಬ್ಬರಿಗೂ ಅರ್ಥವಾಯ್ತು. ತಕ್ಷಣ ಅವನನ್ನು ಅಪ್ಪಿಕೊಂಡ ಆಕೆ, ಅವನ ಬೆನ್ನನ್ನು ಸವರುತ್ತಾ 'ಎವರಿಥಿಂಗ್ ವಿಲ್ ಬಿ ಓಕೆ ಬೇಬಿ. ಡೋಂಟ್ ಕ್ರೈ' ಎಂದು ಸಮಾಧಾನಪಡಿಸತೊಡಗಿದಳು. ತಾಯಿಯೊಬ್ಬಳು ಹಿರಿಯ ಮಗನನ್ನು ಸಂತೈಸುವಂತೆ ನನಗೆ ಆ ದೃಶ್ಯ ಕಂಡಿತು.

* * *

ಎರಡನೆಯ ಕಥೆಯೂ ಅದರದೇ ಪುನರಾವೃತ್ತಿಯಾದರೂ, ಆ 'ಗೇ'-ಪತ್ನಿ ತೆಗೆದುಕೊಂಡ ನಿರ್ಧಾರ ಅತ್ಯಂತ ವಿಭಿನ್ನವಾದದ್ದಾಗಿತ್ತು. ಈ ದಂಪತಿ ಆಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದರು. ನನಗೆ ಪರಿಚಿತರೊಬ್ಬರು ಅವರ ಸಮಸ್ಯೆಯನ್ನು ಸೂಕ್ಷ್ಮವಾಗಿ ತಿಳಿಸಿ, ಆಕೆಯೊಡನೆ ಮಾತಾಡಲು ಕೇಳಿಕೊಂಡರು. ಮುಖಾಮುಖಿಯಾಗಲು ಸಾಧ್ಯವಿಲ್ಲವಾದ್ದರಿಂದ ವಿಡಿಯೋ ಮುಖಾಂತರ ಅವರನ್ನು ಭೇಟಿಯಾಗಿ, ಆಕೆಯ ಮಾತುಗಳನ್ನು ಕೇಳಿಸಿಕೊಂಡೆ.

ಮೂಲತಃ ಈ ದಂಪತಿ ರಾಜಸ್ಥಾನದವರು. ಎರಡೂ ಮನೆಯವರು ಜಾತಕ ನೋಡಿ, ಮನೆತನಗಳನ್ನು